## ಬಸ್ ನಿಲ್ದಾಣದಲ್ಲಿ 'ಪುಸ್ತಕದ ಗೂಡು'

ಗೋಡೆಗೆ ಹೊಂದಿಕೊಂಡಂತೆ ಗೀಜಗನ ಗೂಡನ್ನು ಹೋಲುವ ವರ್ಣಮಯ ಕಪಾಟು. ಅದರೊಳಗೆ ಕತೆ, ಕಾದಂಬರಿ, ಕವಿತೆ, ಮಕ್ಕಳ ಸಾಹಿತ್ಯ ಪುಸ್ತಕಗಳು. ಜೊತೆಗೆ ಮಾಸಪತ್ರಿಕೆ, ವಾರಪತ್ರಿಕೆಗಳ ಸಂಗ್ರಹ. ಅರೇ! ಇದರಲ್ಲೇನು ವಿಶೇಷ ಎಂದು ನಿಮಗನಿಸಬಹುದು. ವಿಶೇಷವೆಂದರೆ ಈ ವರ್ಣಮಯ ಪುಸ್ತಕದ ಕಪಾಟು ಸ್ಥಾಪನೆಗೊಂಡಿರುವುದು ಸದಾ ಜನಜಂಗುಳಿಯಿಂದ ಕೂಡಿರುವ ಬಸ್ ನಿಲ್ದಾಣವೊಂದರಲ್ಲಿ.

ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಉಜಿರೆ ಬಸ್ ನಿಲ್ದಾಣದಲ್ಲಿ ಸ್ಥಳೀಯ ಗ್ರಾಮ ಪಂಚಾಯಿತಿ ವತಿಯಿಂದ ಇದನ್ನು ನಿರ್ಮಿಸಲಾಗಿದೆ. 'ಪುಸ್ತಕದ ಗೂಡು' ಜನರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಬಸ್ಸಿಗಾಗಿ ಕಾಯುವ ಸಮಯದಲ್ಲಿ ವಿದ್ಯಾರ್ಥಿಗಳು, ಸಾರ್ವಜನಿಕರು ಪುಸ್ತಕಗಳನ್ನು ಓದಿ ಸಮಯ ಸದುಪಯೋಗಪಡಿಸಿಕೊಳ್ಳಲಿ ಎಂಬ ಉದ್ದೇಶದಿಂದ ಈ ಗೂಡನ್ನು ರಚಿಸಲಾಗಿದೆ. ಇದರ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಸ್ಥಳೀಯರಿಗೆ ನೀಡಲಾಗಿದೆ.

–ಎಂ.ಎಸ್. ಶೋಭಿತ್, ಮೂಡ್ಕಣಿ







## ತೋಟಕ್ಕೂ ಚೌಡೇಶ್ವರಿ ರಕ್ಷಣೆಯಂತೆ...

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ದೇಗುಲ ದರ್ಶನ ಮಾಡಲು ಕುಟುಂಬ ಸಮೇತ ಹೋಗಿದ್ದ ಸಂದರ್ಭದಲ್ಲಿ ಅಲ್ಲಿಂದ ನಾಲ್ಕೈದು ಕಿ.ಮೀ. ದೂರದಲ್ಲಿನ ಕೆರೆಮನೆ ಹೋಮ್ ಸ್ಟೇಯಲ್ಲಿ ವಾಸ್ತವ್ಯ ಮಾಡಿದ್ದೆವು. ಬೆಳಿಗ್ಗೆ ವಾಯುವಿಹಾರಕ್ಕೆ ಹೋಗಿದ್ದಾಗ ಗೇಟಿನ ಪಕ್ಕ ಎಚ್ಚರಿಕೆ ಫಲಕ ಹಾಕಲಾಗಿತ್ತು. ಅದರಲ್ಲಿದ್ದ ಬರಹವನ್ನು ನೋಡಿ ಆಶ್ಚರ್ಯಗೊಂಡೆ. 'ಕೆರೆಮನೆ ಹೋಮ್ ಸ್ಟೇ' ಒಂದು ತೋಟದ ಮನೆ. ಅಡಿಕೆ, ತೆಂಗು, ಮೆಣಸು, ಕಾಫಿ ಇತರೆ ಬೆಳೆಯನ್ನು ಇಲ್ಲಿ ಬೆಳೆಯಲಾಗಿದೆ. ಎಚ್ಚರಿಕೆ ಫಲಕದಲ್ಲಿ ತೋಟದ ಮಾಲೀಕರು, 'ನಮ್ಮ ಜಮೀನು ಮತ್ತು ಸುತ್ತಲ ಗದ್ದೆ, ಬ್ಯಾಣ, ಸ್ಥಿರಾಸ್ತಿ ಜಾಗದ ಸುತ್ತಮುತ್ತಲ ಕಳ್ಳತನ ಆಗದಂತೆ ಶ್ರೀ ಚೌಡೇಶ್ವರಿ ದೇವಿಯ ರಕ್ಷಣೆ ಇದೆ. ಎಚ್ಚರಿಕೆ' ಎಂದು ಬರೆಯಲಾಗಿದೆ.

ಆಸ್ತಿ, ಮನೆ ರಕ್ಷಣೆಗೆ ಕಾವಲುಗಾರರನ್ನು ನೇಮಕ ಮಾಡಿಕೊಳ್ಳುವುದು ಅಥವಾ ಇಲ್ಲವೆ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸುವುದನ್ನು ನೋಡಿದ್ದೇನೆ. ಆದರೆ ಇಲ್ಲಿ ಕಳ್ಳರಿಂದ ರಕ್ಷಣೆಗಾಗಿ ಈ ರೀತಿ ದೇವರ ಮೊರೆ ಹೋಗಿರುವುದು ತುಸು ವಿಭಿನ್ನವಾಗಿ ಕಂಡಿತಾದರೂ ದೇವರ ಮೇಲಿನ ಭಯ ಭಕ್ತಿಯನ್ನು ಜನರು ಹೇಗೆಲ್ಲಾ ಬಳಸಿಕೊಳ್ಳುತ್ತಾರೆ ಎಂದನಿಸಿತು.

–ಸಿ. ಸಿದ್ದರಾಜು ಆಲಕೆರೆ, ಮಂಡ್ಯ

## ಮಸಾಲೆ ಅರೆಯಲು ಚಪ್ಪಡಿ ಕಲ್ಲು

ಕಲ್ಲಿನಲ್ಲಿ ಮಸಾಲೆ ಅರೆದು ಮಾಡಿದ ಅಡುಗೆ ಹೆಚ್ಚು ರುಚಿಕರ. ಕಾಲ ಬದಲಾದಂತೆ ಮಿಕ್ಸಿ, ಗ್ರೈಂಡರ್‌ಗಳನ್ನು ಉಪಯೋಗಿಸಲು ಪ್ರಾರಂಭಿಸಿದರು. ಆದರೆ, ತಮಿಳುನಾಡು, ಕೇರಳ ಸೇರಿದಂತೆ ನಮ್ಮ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಮಸಾಲೆಗಳನ್ನು ಕಲ್ಲಿನ ಮೇಲೆಯೇ ಅರೆದು ಅಡುಗೆ ತಯಾರಿಸುತ್ತಾರೆ. ಸಾಮಾನ್ಯವಾಗಿ ಮಸಾಲೆ ಅರೆಯಲು ಉಪಯೋಗಿಸುವ ಕಲ್ಲು ಹೆಚ್ಚೆಂದರೆ, ಒಂದು ಅಡಿ ಅಗಲ ಹಾಗೂ ಒಂದೂವರೆ ಅಡಿ ಉದ್ದವಿರುತ್ತವೆ. ಅಥವಾ ರುಬ್ಬುವ ಕಲ್ಲನ್ನೂ ಬಳಸುವುದುಂಟು.

ಮೊಳಕಾಲ್ಮೂರು ತಾಲ್ಲೂಕಿನ ಸಿದ್ದಾಪುರ ಸಮೀಪವಿರುವ ಬ್ರಹ್ಮಗಿರಿ ಬೆಟ್ಟದಲ್ಲಿರುವ ಮಠಕ್ಕೆ ಭೇಟಿಯಿತ್ತಾಗ ಮಸಾಲೆ ಅರೆಯುವ ದೊಡ್ಡ ಗಾತ್ರದ ಕಲ್ಲನ್ನು ನೋಡಿ ಅಚ್ಚರಿಯಾಯಿತು. ಆರು ಅಡಿ ಉದ್ದ ಹಾಗೂ ಮೂರು ಅಡಿ ಅಗಲವಿರುವ ಈ ಕಲ್ಲಿನ ಮೇಲೆ ಮಸಾಲೆ ಪದಾರ್ಥಗಳನ್ನು ಅರೆಯಲು ಮಾತ್ರವಲ್ಲದೆ ವಿಶೇಷ ದಿನಗಳಲ್ಲಿ ಹೋಳಿಗೆ ಹೂರಣವನ್ನೂ ಮಾಡುತ್ತಾರಂತೆ. ಇಷ್ಟು ದೊಡ್ಡ ಗಾತ್ರದ ಮಸಾಲೆ ಅರೆಯುವ ಕಲ್ಲು ಬೇರೆಲ್ಲೂ ಇದ್ದಂತೆ ಕಾಣುವುದಿಲ್ಲ.

–ಜಿ. ಪದ್ಮಾ, ಸಂಡೂರು

